

# ಕಂದರ-ಕಾಮಧೇನು



ಪ್ರಾಣಿಗಳ ಪರಿಚಯ ಮತ್ತು ಪುಟ್ಟ ನಾಟಕ.



ಲೇಖಕಿ : ಜಗ್ಗು ಪ್ರಿಯದರ್ಶಿನಿ



ಬೆಲೆ : ರೂ. 3-00

॥ ಜೈ ಭಾರತಮಾತಾ ॥

# ಕಂದರ—ಕಾಮಧೇನು

## ಪ್ರಾಣಿಗಳ ಪರಿಚಯ ಮತ್ತು ಪುಟ್ಟ ನಾಟಕ.


ಲೇಖಕಿ :

ಜಗ್ಗು ಪ್ರಿಯದರ್ಶಿನಿ



ಸಂಪಾದಕರು ಮತ್ತು ಪ್ರಕಾಶಕರು :

ಜಗ್ಗು ಪ್ರಿಯದರ್ಶಿನಿ

10 ನೇ ಕ್ರಾಸ್, ಸೋಮೇಶ್ವರ ಎಕ್ಸ್‌ಟೆನ್ಷನ್

ತು ಮ ಕೂ ರು – 572 102

ಎಲ್ಲಾ ಹಕ್ಕುಗಳು : ಲೇಖಕಿಯವರದು

ಮೊದಲು ಮುದ್ರಣ : ಜನವರಿ 1985

ಬೆಲೆ : ರೂ 3-00

ಮುದ್ರಕರು :-
ಭಗವಾನ್ ಆರ್ಟ್ ಪ್ರಿಂಟರ್ಸ್
ಲಿಂಕ್ ರೋಡ್, ಮಲ್ಲೇಶ್ವರಂ, ಬೆಂಗಳೂರು-560 003.

# (ನನ್ನ ಮಾತು)

ಉಪಾಧ್ಯಾಯ ವೃತ್ತಿಯಲ್ಲಿದ್ದು ನಿವೃತ್ತಳಾದ ಸಾಹಿತಿ ನಾನು. ಅನೇಕ ಮಕ್ಕಳ ಸಾಹಿತ್ಯವನ್ನು ರಚಿಸಿದೆ. ಆದರೆ ಮುದ್ರಣ ಮಾಡಿಸಿ ಮಕ್ಕಳ ಕೈಗೆ ಪುಸ್ತಕ ದೊರಕುವಂತೆ ಮಾಡುವುದು ಸುಲಭಸಾಧ್ಯವಲ್ಲ.

ಶಾಲಾ ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು "ಮಕ್ಕಳಿಗೆ ಮಧು" ಹೆಸರಿನಿಂದ ಸ್ವಂತ ಖರ್ಚಿನಿಂದ ಮುದ್ರಣ ಮಾಡಿಸಿದೆ. ಅದಕ್ಕೆ ವಿದ್ಯಾ ಇಲಾಖೆ ಯಿಂದ ಒಳ್ಳೆ ಅಭಿಪ್ರಾಯ ಬಂದಿತು. ಅದೇ ಪುಸ್ತಕಕ್ಕೆ ಕಾವ್ಯಾನಂದ ಪುರ ಸ್ಕಾರವೂ ದೊರಕಿತು.

ಇದೀಗ ಪುಟ್ಟ ಮಕ್ಕಳಿಗಾಗಿಯೇ ಬರೆದ "ಕಂದರ-ಕಾಮಧೇನು" ಪುಸ್ತಕ ಸ್ವಂತ ಖರ್ಚಿನಿಂದ ಮುದ್ರಣ ಮಾಡಿಸಿ ಪುಟಾಣಿಗಳ ಕೈಯ್ಯಲ್ಲಿ ಪುಸ್ತಕ ಇಡುವ ಉತ್ಸಾಹದಲ್ಲಿದ್ದೇನೆ. ನರ್ಸರಿ-ಮತ್ತು ಪ್ರಾಥಮಿಕ ತರಗತಿಯ ಪುಟ್ಟ ಮಕ್ಕಳಿಗೆ ಇದು ಬಹಳ ಪ್ರಿಯವಾದ ಪುಸ್ತಕವಾಗ ಬಹುದೆಂದು ನನ್ನ ಅನುಭವದಿಂದ ಹೇಳಬಲ್ಲೆ. ಇದರಲ್ಲಿ 24 ಪ್ರಾಣಿ ಪರಿಚಯಕವನಗಳಿವೆ, "ನಾನು ಯಾರು ಗೊತ್ತೇ" ಇದನ್ನು ಮಕ್ಕಳಿಗೆ ಅಭಿನಯದೊಂದಿಗೆ ಹೇಳಿ ಕೊಡಬಹುದು.

ಪಪ್ಪೀ ಕ್ಷಿಮದುವೆಯೂ ಸಹ ಪುಟ್ಟ ಮಕ್ಕಳು ಅಭಿನಯಿಸುವ ನಾಟಕ್ಕ ಸಂಭಾಷಣೆಯನ್ನು ಮೊದಲು ಟೇಪ್ ರಿಕಾರ್ಡ್ ಮಾಡಿಟ್ಟುಕೊಂಡು ನಂತರ ಮಕ್ಕಳಿಂದ ಅಭಿನಯಿಸಿಸುವುದು ಸುಲಭ.

ಈ ಪುಸ್ತಕದ ಮುದ್ರಣಕ್ಕೆ ಸಾಮಾನ್ಯ ಚಿತ್ರಗಳ ಅಚ್ಚು ಒದಗಿಸುವುದೂ ಕಷ್ಟವಾಯಿತು. ಸೋವಿಯತ್ ಪುಸ್ತಕಗಳಂತೆ ಬಣ್ಣ ಬಣ್ಣದ ಚಿತ್ರಗಳನ್ನು ನಾವು ಮಕ್ಕಳಿಗೆ ಒದಗಿಸಲಾರೆವಲ್ಲಾ; ಎಂದು ವ್ಯಥೆಯಾಗುತ್ತದೆ.

ಶ್ರಮ ವಹಿಸಿ ಚಿತ್ರದ ಅಚ್ಚು, ಮತ್ತು ಮುದ್ರಣವನ್ನು ಅಂದವಾಗಿ ಮಾಡಿ ಕೊಟ್ಟ ಭಗವಾನ್ ಆರ್ಟ್ಸ್ ಪ್ರೆಸ್ಸಿನ ಶ್ರೀಮಾನ್. ಸಾಯಿ ಕುಮಾರ್ ರವರಿಗೆ ನಾನು ಕೃತಜ್ಞಳು ಮುದ್ರಣ ಮಾಡಿಸಲು ಪ್ರೋತ್ಸಾಹ ಕೊಟ್ಟ ಅನೇಕ ಮಹನೀ ಯರುಗಳಿಗೆ ನನ್ನ ಅಭಿನಂದನೆಗಳು.

ವಿದ್ಯಾ ಇಲಾಖೆಯು ಈ ಪುಸ್ತಕವನ್ನು ಒಪ್ಪಿಕೊಂಡು ಶಾಲಾ ಮಕ್ಕಳಿಗೆ ದೊರಕುವಂತೆ ಮಾಡಿದರೆ ನನ್ನ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ

ಲೇಖಕಿ. ಜಗ್ಗು ಪ್ರಿಯದರ್ಶಿನಿ

(ರಾಜ್ಯ ಪ್ರಶಸ್ತಿ ಪಡೆದ ಶಿಕ್ಷಕಿ, ಜಿ. ಚಿನ್ನಮ್ಮ)

ಸಿರಿಗನ್ನಡಂ ಗೆಲ್ಗೆ

**ಡಾ|| ಸಿದ್ಧಯ್ಯ ಪುರಾಣಿಕ** ಐ.ಎ.ಎಸ್. (ರಿ.)   ದೂರವಾಣಿ : 74361

"ಶ್ರೀಗಿರಿ"

4/5A ಅಲಿ ಅಸ್ಕರ್ ರಸ್ತೆ,

ಬೆಂಗಳೂರು-560 052

ದಿನಾಂಕ : 3-7-1985

# ಮುನ್ನುಡಿ

ರಾಜ್ಯ ಪ್ರಶಸ್ತಿ ಪಡೆದ ಶಿಕ್ಷಕಿಯರೂ, ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಕೃಷಿ ಮಾಡಿರುವವರೂ, ಕನ್ನಡ ಸರಸ್ವತಿಯ ಉಪಾಸಕರೂ ಆದ ಸೋದರಿ ಜಗ್ಗು ಪ್ರಿಯದರ್ಶಿನಿಯವರ "ಕಂದರ ಕಾಮಧೇನು" ಎಂಬ ಈ ಮೌಲಿಕ ಕೃತಿಗೆ ಮುನ್ನುಡಿ ಬರೆಯುವುದು ನನಗೆ ಹೆಮ್ಮೆಯ, ಹಿಗ್ಗಿನ ವಿಷಯ "ಮಕ್ಕಳ ಮಧು" ಎಂಬ ಇವರ ಕೃತಿಗೆ "ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್"ನ ಕಾವ್ಯಾನಂದ ಪುರಸ್ಕಾರ ದೊರೆತಾಗ ಇವರ ಪರಿಚಯ ಭಾಗ್ಯ ಪ್ರಾಪ್ತವಾಯಿತು. ಇವರ ಸರಸ ಸಜ್ಜನಿಕೆಗೆ, ದೈಹಿಕ ದೌರ್ಬಲ್ಯವನ್ನು ಸವಾಲೆಂಬಂತೆ ಸ್ವೀಕರಿಸಿ ಮಕ್ಕಳ ಹಾಗೂ ಮಕ್ಕಳ ಸಾಹಿತ್ಯದ ವಿಕಾಸಕ್ಕಾಗಿ ಇವರು ಮಾಡುತ್ತಿರುವ ಪ್ರಯತ್ನಗಳಿಗೆ, ಎದುರಾಗುವ ಎಡರುಗಳನ್ನು. ಎದೆಗುಂದದೆ ಎದುರಿಸುವ ಇವರ ದಿಟ್ಟತನಕ್ಕೆ, ಗಟ್ಟಿತನಕ್ಕೆ ಮನಸೋತೆ. ಈಗ ಈ "ಕಂದರ ಕಾಮಧೇನು" ನನ್ನು ಓದಿ ಹರ್ಷಿಸಿದ್ದೇನೆ.

ಇದರಲ್ಲಿ ಸೇರ್ಪಡೆಯಾಗಿರುವ "ನಾನು ಯಾರೂ ಗೊತ್ತೆ?" ಎಂಬ ಪ್ರಾಣಿ ಪರಿಚಯಾತ್ಮಕ ಸಚಿತ್ರ ಪದ್ಯ ನನಗೆ ತುಂಬ ಹಿಡಿಸಿದೆ. ಸಹಜವಾಗಿಯೇ ಪ್ರಾಣಿಗಳತ್ತ ಆಕರ್ಷಿತರಾಗುವ ಬಾಲಕ ಬಾಲಕಿಯರು ಈ ಪದ್ಯವನ್ನು ತುಂಬ ಮೆಚ್ಚುವರೆಂಬಲ್ಲಿ ಸಂದೇಹವಿಲ್ಲ. "ಪಪ್ಪೀ ಮದುವೆ" ರೋಚಕವೂ ಉದ್ಬೋಧಕವೂ ಆದ ಕಿರುನಾಟಕ. ಉಳಿದ ರಚನೆಗಳೂ ಮಕ್ಕಳನ್ನು ಮೋಹಿಸದಿರವು ಇಂಥ ಒಳ್ಳೆಯ ಕೃತಿಯನ್ನು ಕನ್ನಡ ಮಕ್ಕಳಿಗೆ ನೀಡಿದ ಸೋದರಿ ಜಗ್ಗು ಪ್ರಿಯದರ್ಶಿನಿಯವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ಅವರಿಗೆ ಸಾಕಷ್ಟು ಪ್ರೋತ್ಸಾಹ ದೊರೆತು ಅವರ ಮುಂದಿನ ಕೃತಿಗಳಿಗೆ ಪ್ರೇರಣೆ ದೊರೆಯಲೆಂದು ಹಾರೈಸುತ್ತೇನೆ.

ಸಿದ್ಧಯ್ಯ ಪುರಾಣಿಕ

# ಕಂದರ - ಕಾಮಧೇನು




ನೂರು ಕಣ್ಣು
ಬಣ್ಣ ಬಣ್ಣ
ಸೋಗೆ ಗರಿಯು
ಸೊಗಸು ನಾಟ್ಯ

ನಾನು ಯಾರು ಗೊತ್ತೇ? ಓ....ಗೊತ್ತು ಗೊತ್ತೂ ನೀನು ನವಿಲು

ಕಣ್ಣು ಚಂದ
ಚುಕ್ಕೆ ಮೈಯಿ
ಕೊಂಬು ಉದ್ದ
ಕುಣಿವ ನಡಿಗೆ



ನಾನು ಯಾರು ಗೊತ್ತೇ? ಓ ...ಗೊತ್ತು ಗೊತ್ತೂ ನೀನು ಜಿಂಕೆ




ಬಾಲ ಡೊಂಕು
ಬುದ್ಧಿ ಚುರುಕು
ಉಂಡ ಮನೆಗೆ
ಪ್ರಾಣ ಕೊಡುವೆ

ನಾನು ಯಾರು ಗೊತ್ತೇ? ಓ....ಗೊತ್ತು ಗೊತ್ತೂ ನೀನು ನಾಯಿ

ನನ್ನ ಹಾಲು
ನಿನ್ನ ಪಾಲು
ಹುಲ್ಲು ಹಿಂಡಿ
ನನ್ನ ಮೇವು




ನಾನು ಯಾರು ಗೊತ್ತೇ? ಓ... ಗೊತ್ತು ಗೊತ್ತೂ ನೀನು ಹಸು




ಬಳುಕಿ ಹರಿವೆ
ದೂರ ಸರಿವೆ
ಮಾರು ದೇಹ
ವಿಷದ ಜಂತು

ನಾನು ಯಾರು ಗೊತ್ತೇ? ಓ... ಗೊತ್ತು ಗೊತ್ತೂ ನೀನು ಹಾವು



ದೊಡ್ಡ ದೇಹ
ಕಣ್ಣು ಸಣ್ಣ
ಸೊಂಡಿ ಲುಂಟು
ಭೀಮ ಬಲ

ನಾನು ಯಾರು ಗೊತ್ತೇ? ಓ... ಗೊತ್ತು ಗೊತ್ತೂ ನೀನು ಆನೆ



ಭಾರಿ ಹೇರ ಹೊರುವೆನು
ಬೈಗು ಬೆಳಗು ದುಡಿವೆನು
ಬೈದು ನನ್ನ ಹೊಡೆವನು
ದೋಭಿ ನನ್ನ ಒಡೆಯನು


ನಾನು ಯಾರು ಗೊತ್ತೇ? ಓ.. ಗೊತ್ತು ಗೊತ್ತೂ ನೀನು ಕತ್ತೆ

ಹೂವ ಹುಡುಕಿ ಹಾರುವೆ
ಅದರರಸವ ಹೀರುವೆ
ಗೂಡಿನೊಳಗೆ ತುಂಬುವೆ
ಮಧುರ ಮಧುವ ನೀಡುವೆ



ನಾನು ಯಾರು ಗೊತ್ತೇ? ಓ.. ಗೊತ್ತು ಗೊತ್ತೂ ನೀನು ಜೇನು ನೊಣ

ತಲೆಯು ಬಗ್ಗಿ ನಡೆಯುವೆ
ಹಿಂದು ಹಿಂದು ಸಾಗುವೆ
ಕಂಡ ಗಿಡವ ತಿನ್ನುವೆ
ನಿನ್ನ ಚಳಿಯ ನೀಗುವೆ




ನಾನು ಯಾರು ಗೊತ್ತೇ? ಓ ...ಗೊತ್ತು ಗೊತ್ತು ನೀನು ಕುರಿ



ರೆಕ್ಕೆ ಪುಕ್ಕ ಚೆಂದ
ಕೆಂಪು ಟೋಪಿ ಅಂದ
ನನ್ನ ಕೂಗಿ ನಿಂದ
ಸೂರ್ಯ ಓಡಿ ಬಂದ

ನಾನು ಯಾರು ಗೊತ್ತೇ? ಓ....ಗೊತ್ತು ಗೊತ್ತು ನೀನು ಕೋಳಿ

ಪುಟ್ಟ ಹಕ್ಕಿ
ಕಪ್ಪು ಬಣ್ಣ
ಕೊಕ್ಕು ಸಣ್ಣ
ಕೂಗು ಇಂಪು




ನಾನು ಯಾರು ಗೊತ್ತೇ? ಓ....ಗೊತ್ತು ಗೊತ್ತು ನೀನು ಕೋಗಿಲೆ




ಹಸಿರು ರೆಕ್ಕೆ
ಕೆಂಪು ಮೂಗು
ಡೊಂಕು ನಡಿಗೆ
ಮುದ್ದು ಮಾತು

ನಾನು ಯಾರು ಗೊತ್ತೇ? ಓ .. ಗೊತ್ತು ಗೊತ್ತು ನೀನು ಗಿಣಿ

ಜೋಲು ತುಟಿ
ಕಾಲು ಉದ್ದ
ಬಾಲ ಮೋಟು
ಡುಬ್ಬ ಬೆನ್ನು




ನಾನು ಯಾರು ಗೊತ್ತೇ? ಓ....ಗೊತ್ತು ಗೊತ್ತು ನೀನು ಒಂಟೆ




ತಿಳಿಯ ಕೊಳ
ನನ್ನ ಸ್ಥಳ
ಬಿಳಿಯ ರೆಕ್ಕೆ
ಬಿಂಕ ನಡಿಗೆ

ನಾನು ಯಾರು ಗೊತ್ತೇ? ಓ....ಗೊತ್ತು ಗೊತ್ತು ನೀನು ಹಂಸ

ರಾಜ ನನ್ನ ಸಾಕು
ಹುಲ್ಲು ಹುರುಳಿ ಹಾಕು
ಸವಾರ ನೊಬ್ಬ ಬೇಕು
ಆಗ ನೋಡು ಜೋಕು



ನಾನು ಯಾರು ಗೊತ್ತೇ? ಓ....ಗೊತ್ತು ಗೊತ್ತು ನೀನು ಕುದುರೆ



ನೀರಿನಲ್ಲಿ ಈಜುವೆ
ಫಳ ಫಳನೆ ಹೊಳೆಯುವೆ
ಜೀವ ಸತ್ವ ನೀಡುವೆ
ಬಲೆಗೆ ಬಿದ್ದು ಸಾಯುವೆ

ನಾನು ಯಾರು ಗೊತ್ತೇ? ಓ....ಗೊತ್ತು ಗೊತ್ತು ನೀನು ಮೀನು



ಬುದ್ಧಿ ಜೀವಿ ನಾನು
ವಿದ್ಯೆ ಬುದ್ಧಿ ಕಲಿತೆ
ಎಲ್ಲವನ್ನು ಮರೆತೆ
ಸ್ವಾರ್ಥಿಯಾಗಿ ನಿಂತೆ

**ನಾನು ಯಾರು ಗೊತ್ತೇ? ಓ....ಗೊತ್ತು ಗೊತ್ತೂ, ನೀನು ಮಾನವ**

ಹುಲಿಯ ಜಾತಿ ನಾನು
ಹಾಲು ಮೊಸರು ಬೇಕು
ಇಲಿಯು ಕಂಡರೆ ಸಾಕು
ಹೊಂಚಿ ಹಿಡಿವೆ ನಾಲ್ಕು



**ನಾನು ಯಾರು ಗೊತ್ತೇ? ಓ ...ಗೊತ್ತು ಗೊತ್ತೂ, ನೀನು ಬೆಕ್ಕು**



ಮರಕ್ಕೆ ಜಿಗಿವೆ
ಹಲ್ ಹಲ್ ಕಿರಿವೆ.
ಗೇರ್ ಗೇರ್ ಎಂದು
ಕರೆದರೆ ಬರುವೆ

**ನಾನು ಯಾರು ಗೊತ್ತೇ? ಓ....ಗೊತ್ತು ಗೊತ್ತೂ, ನೀನು ಕೋತಿ**

ಗೋಡೆ ಮೇಲೆ ಹರಿಯುವೆ
ಜೇಡಹುಳುವ ತಿನ್ನುವೆ
ಲೊಚ್ ಲೊಚ್ ಎನ್ನುವೆ
ನಿನ್ನ ಮೇಲೆ ಬೀಳುವೆ.



**ನಾನು ಯಾರು ಗೊತ್ತೇ? ಓ....ಗೊತ್ತು ಗೊತ್ತೂ, ನೀನು ಹಲ್ಲಿ**

# [ಕೆಟ್ಟ ಸಹವಾಸ]





ಚೋಟು ಬಲು ಚೂಟಿ ಹುಡುಗ, ಆದರೆ ಬಲು ಕುಳ್ಳ. ಮೂರೇಗೇಣು ಉದ್ದ. ಯಾರಾದರೂ ಒಂದು ಕೈಲಿ ಎತ್ತಿ ಎಸೆಯಬಹುದಾಗಿತ್ತು ಅವನನ್ನು. ಲಂಬು ಅವನ ಸ್ನೇಹಿತ ಅವನು ತುಂಬಾ ಉದ್ದ.


ಇಬ್ಬರೂ ಯಾವಾಗಲೂ ಜೊತೆಯಾಗಿಯೇ ಇರುತ್ತಿದ್ದರು. ಇಬ್ಬರಿಗೂ ವಿದ್ಯೆ ಹತ್ತಲಿಲ್ಲ. ಇಬ್ಬರೂ ಶಾಲೆಗೆ ಚಕ್ಕರ್ ಹಾಕಿ ಊರಿನ ಆಚೆ ಮಾವಿನ ತೋಪು, ತೆಂಗಿನ ತೋಟ, ಗಿಡ ಪೊದೆಗಳ ಮಧ್ಯೆ ಅಲೆದು ಮನೆಗೆ ಬರುತ್ತಿದ್ದರು.

ಲಂಬು ಇದ್ದಲ್ಲಿ ಚೋಟು. ಇಬ್ಬರೂ ಯಾವುದಾದರೂ ತೋಟಕ್ಕೆ ನುಗ್ಗುವುದು, ತೋಟದ ಮಾಲಿಗೆ ಕಾಣದಂತೆ ಸೀಬೆ ಹಣ್ಣು, ಮಾವಿನಕಾಯಿ, ಸಪ್ಪೋಟ, ಪಪ್ಪಾಯಿ, ಯಾವಹಣ್ಣು ಸಿಕ್ಕಿದರೆ ಅದನ್ನು ಲೂಟಿ ಹೊಡೆದು ಹೊತ್ತು ತಂದು ಪೊದೆ ಸಂದಿಯಲ್ಲಿ ಕುಳಿತು ತಿನ್ನುತ್ತಿದ್ದರು.

ಹತ್ತಿಯಂತೆ ಬಿಳುಪು
ನನ್ನ ಕೂದಲು ಹೊಳಪು
ಓಟದಲ್ಲಿ ಚುರುಕು
ಸಾಧು ಪ್ರಾಣಿ ನಾನು




ನಾನು ಯಾರು ಗೊತ್ತೇ? ಓ ಗೊತ್ತು ಗೊತ್ತೂ ನೀನು ಮೊಲ



ಕೊಳಕು ಹೊಲಸು ತಿನ್ನುವೆ
ಕೇರಿ ಶುದ್ಧಿ ಮಾಡುವೆ
ಭಾರಿ ಹೊಟ್ಟೆ ನನ್ನದು
ಊರಿನಾಚೆ ಮಲಗುವೆ

ನಾನು ಯಾರು ಗೊತ್ತೇ? ಓ ...ಗೊತ್ತು ಗೊತ್ತೂ ನೀನು ಹಂದಿ

ಸಂಘ ಜೀವಿ ನಾನು
ಕಾಳು ಕುಕ್ಕಿ ತಿನ್ನುವೆ
ಪಂದ್ಯಕಾಗಿ ಹಾರುವೆ
ಬೆಡಗಿನಿಂದ ನಡೆಯುವೆ



ನಾನು ಯಾರು ಗೊತ್ತೇ? ಓ....ಗೊತ್ತು ಗೊತ್ತೂ ನೀನು ಪಾರಿವಾಳ

ಕರ್ರಗೆ ಕಾಣುವೆ
ಮಿರ್ರನೆ ಮಿಂಚುವೆ
ಭರ್ರನೆ ಹಾರುವೆ
ಕಾ–ಕಾ ಎನ್ನುವೆ



ನಾನು ಯಾರು ಗೊತ್ತೇ? ಓ....ಗೊತ್ತು ಗೊತ್ತೂ ನೀನು ಕಾಗೆ

# [ಕೆಟ್ಟ ಸಹವಾಸ]



ಚೋಟು ಬಲು ಚೂಟಿ ಹುಡುಗ, ಆದರೆ ಬಲು ಕುಳ್ಳ. ಮೂರೇಗೇಣು ಉದ್ದ. ಯಾರಾದರೂ ಒಂದು ಕೈಲಿ ಎತ್ತಿ ಎಸೆಯಬಹುದಾಗಿತ್ತು ಅವನನ್ನು. ಲಂಬು ಅವನ ಸ್ನೇಹಿತ ಅವನು ತುಂಬಾ ಉದ್ದ.

ಇಬ್ಬರೂ ಯಾವಾಗಲೂ ಜೊತೆಯಾಗಿಯೇ ಇರುತ್ತಿದ್ದರು. ಇಬ್ಬರಿಗೂ ವಿದ್ಯೆ ಹತ್ತಲಿಲ್ಲ. ಇಬ್ಬರೂ ಶಾಲೆಗೆ ಚಕ್ಕರ್ ಹಾಕಿ ಊರಿನ ಆಚೆ ಮಾವಿನ ತೋಪು, ತೆಂಗಿನ ತೋಟ, ಗಿಡ ಪೊದೆಗಳ ಮಧ್ಯೆ ಅಲೆದು ಮನೆಗೆ ಬರುತ್ತಿದ್ದರು.

ಲಂಬು ಇದ್ದಲ್ಲಿ ಚೋಟು. ಇಬ್ಬರೂ ಯಾವುದಾದರೂ ತೋಟಕ್ಕೆ ನುಗ್ಗುವುದು, ತೋಟದ ಮಾಲಿಗೆ ಕಾಣದಂತೆ ಸೀಬೆ ಹಣ್ಣು, ಮಾವಿನಕಾಯಿ, ಸಪ್ಪೋಟ, ಪಪ್ಪಾಯಿ, ಯಾವಹಣ್ಣು ಸಿಕ್ಕಿದರೆ ಅದನ್ನು ಲೂಟಿ ಹೊಡೆದು ಹೊತ್ತು ತಂದು ಪೊದೆ ಸಂದಿಯಲ್ಲಿ ಕುಳಿತು ತಿನ್ನುತ್ತಿದ್ದರು.

ಒಂದು ದಿನ :—

ಚೋಟು ಲಂಬು ಜೋಡಿ
ತೋಟ ತೋಟಕೆ ಓಡಿ
ಅತ್ತ ಇತ್ತ ನೋಡಿ
ಕಳ್ಳ ತನವ ಮಾಡಿ

ಹೀಗೆ ತೋಟದ ಮಾಲಿಗೆ ಕಾಣದೆ ಚೋಟುವನ್ನು ಮರ ಹತ್ತಿಸಿ ಹಣ್ಣು ಕೀಳಿಸುತ್ತಿದ್ದ ಕೆಟ್ಟ ಲಂಬು.

ಜೇಬಿನ ತುಂಬ ಹಣ್ಣು
ಮಾವಿನ ಮೇಲೆ ಕಣ್ಣು
ಬಣ್ಣ ಬಣ್ಣದ ಹಣ್ಣು
ಕೆಳಗೆ ಬಿದ್ದು ಮಣ್ಣು

ಚೋಟು ಕಿತ್ತು ಹಾಕಿದ ಹಣ್ಣನ್ನೆಲ್ಲಾ ಮಣ್ಣು ಒರೆಸಿ ಜೇಬಿಗೆ ತುಂಬಿಕೊಂಡ ಲಂಬು, ಅಷ್ಟರಲ್ಲಿ ಎಲ್ಲಿದ್ದನೋ ಮಾಲಿ ನೋಡಿ ಬಿಟ್ಟಾ........

ಮಾಲಿ ಓಡಿ ಬಂದ
ಕೈಯಲಿ ಹಗ್ಗ ತಂದ
ಕೆಳಗೆ ಇಳಿ ಎಂದ
ಚೋಟು ಸಿಕ್ಕಿ ಬಿದ್ದ

ಕೆಟ್ಟ ಸ್ನೇಹಿತ ಲಂಬು ಚೋಟುವನ್ನು ಬಿಟ್ಟು ಓಡಿದ

ಲಂಬು ಕಾಲು ಉದ್ದ
ಓಡಿ ಹೋಗಿ ಗೆದ್ದ
ಚೋಟುಗೆ ಮಾಲಿ ಒದ್ದ
ಏಟಿಗೆ ನೆಲಕೆ ಬಿದ್ದ

ನೆಲಕ್ಕೆ ಬಿದ್ದ ಚೋಟು ಗೊ......ಳೋ......ಎಂದು ಅತ್ತ

ಚೋಟು ಕಾಲು ಮುರಿಯಿತು
ಮುರಿದು ರಕ್ತ ಹರಿಯಿತು
ಕುಳ್ಳ ಚೋಟು ಕುಂಟನಾದ
ಲಂಬು ಮೋಸ ತಿಳಿಯಿತಾಗ

ಚೋಟು ನಡೆಯಲಾರದೆ ನರಳಿದ ತೋಟದ ಇಬ್ಬರು ಮಾಲಿಗಳು, ಅವನನ್ನು ಬೈದು ಹೊಡೆದು ದರ-ದರನೆ ಎಳೆ ತಂದು ತೋಟದ ಆಚೆ ತಳ್ಳಿದರು.

**ಮಕ್ಕಳೇ ಕೆಟ್ಟ ಸ್ನೇಹದ ಪರಿಣಾಮ ಇದೇ ಅಲ್ಲವೇ?**

⁂ ⁂

## [ ಮಕ್ಕಳಿಗಾಗಿ ನೀತಿ ಕವನ ]

## —ಇರುವೆ—

ಇರುವೆ ಇರುವೆ ನೀನೆಲ್ಲಿರುವೆ ?
ಸಕ್ಕರೆ ಬೆಲ್ಲ ಕಂಡಲಿರುವೆ
ಇರುವೆ ಇರುವೆ ನೀನೆಲ್ಲಿರುವೆ ?
ಮಣ್ಣಿನ ಗೂಡಿನ ಒಳಗಡೆ ಇರುವೆ
ಇರುವೆ ಇರುವೆ ಯಾರೊಡನಿರುವೆ?
ಸಾವಿರ ಇರುವೆಯ ಜೊತೆ ಗೂಡಿರುವೆ
ಇರುವೆ ಇರುವೆ ಎಲ್ಲಿಗೆ ಹೊರಟೆ ?
ಕಾಳನು ಕೂಡಿಸೆ ಸಾಲಲಿ ಹೊರಟೆ
ಇರುವೆ ಇರುವೆ ಏತಕೆ ಕಾಳು ?
ಮಳೆ ದಿನ ಬಂದರೆ ನಮಗೆ ಗೋಳು
ಬೆಂಕಿಯ ಕಂಡರೆ ಓಡುವೆ ಏಕೆ ?
ಬಿಸಿ ಎಂದರೆ ಬಲು ಭಯ ಅದಕೆ
ಮುಟ್ಟಿದ ರೀತಕೆ ಕಚ್ಚುವೆ ಇರುವೆ?
ಕೆಟ್ಟವ ಮಾನವ ಕೊಲ್ಲುವ ಭಯಕೆ
ಸಾಲಲಿ ಹೊರಟು ಕಾಲಿಗೆ ಸಿಕ್ಕಿ ಸಾಯುವೆಯಲ್ಲಾ ?
ಸತ್ತರು ಸಂಘವ ನಾ ಬಿಡಲಾರೆ

ಹಗಲೂ ಇರುಳೂ ಸಡಗರವೇನು ?
ದುಡಿಮೆಯೆ ಎನ್ನ ಬಾಳಿನ ಗುರಿಯು
ನೀ ಅಣುವಾದರು ಸಾರ್ಥಕ ಬದುಕು
ದುಡಿಯದೆ ತಿನ್ನುವ ಮಾನವ ವ್ಯರ್ಥ

# ಪಪ್ಪಿ–ಮದುವೆ

## ಮಕ್ಕಳ ನಾಟಕ (ಎಲ್ಲಾ ಮಕ್ಕಳೂ 5 ಅಥವಾ 6 ವರ್ಷದ್ದಾಗಿರಬೇಕು)

## 1ನೇ ದೃಶ್ಯ

### (ಮನೆಯ ಸನ್ನಿವೇಶ)

(ರೋಜಿ 5 ವರ್ಷದ ಹುಡುಗಿ ಅವಳು ತನ್ನ ರಬ್ಬರ್ ಬೊಂಬೆಯನ್ನು ಮಗುವಿನಂತೆ ಭುಜದ ಮೇಲೆ ಎತ್ತಿಕೊಂಡು ಅಳುವ ಮಗುವನ್ನು ಸಮಾಧಾನ ಮಾಡುವಂತೆ ಅತ್ತಿತ್ತ ಓಡಾಡುತ್ತಾ ಹೇಳುತ್ತಾಳೆ.)

ರೋಜಿ....ಪಪ್ಪೀ ...ಪಪ್ಪೀ... ಪಾಚೋಮ್ಮ, ನೀನು ಜಾಣಮರಿ ಅಳಬೇಡ, ಲಾಲೀ....ಲಾಲೀ....ಇದೋ ಮಿಠಾಯಿ ಬೇಕಾ ಮರೀ? ಥೂ.... ಕೆಟ್ಟ ಪಪ್ಪೀ....ಅಳ್ತಾನೇ ಇದೆ. (ಕೈಯಿಂದ ಕೆಳಕ್ಕೆ ನೂಕುತ್ತಾಳೆ) (ಮತ್ತೆ ಎತ್ತಿಕೊಂಡು) ಅಯ್ಯೋ....ಪಪ್ಪೀ ಅಬ್ಬು ಆಯ್ತೇ? ಬಾಮ್ಮ (ತೊಡೆಮೇಲೆ) ಹಾಕೊಳ್ಳಳ್ಳಾಯೀ....

(ರೋಜಿ ತಾಯಿ ಚಂಪ ಪ್ರವೇಶ 5 ವರ್ಷದ ಹುಡಿಗಿ)

ಚಂಪ..... ಲೇ....ರೋಜೀ ಬಾರೆ ಊಟಕ್ಕೆ ಸ್ಕೂಲಿಗೆ ಹೊತ್ತಾಗುತ್ತೆ.

ರೋಜಿ....ನೋಡಮ್ಮ ನನ್ನ ಪಪ್ಪೀ ಅಳ್ತಾನೇ ಇದೇಮ್ಮ ಅದು ಮಲಗಿದ ಮೇಲೆ ಬರ್ತೀನೆ ಅಮ್ಮ.

ಚಂಪ..... ಇಲ್ಲಿ ಕೊಡು ನಾನು ಮಲಗಿಸ್ತೀನೆ. (ಬೊಂಬೆಯನ್ನು ಎತ್ತಿಕೊಂಡು) ಹೂಂ ನಡಿ ಊಟ ಮಾಡು.

ರೊ(ಜಿ....ಅಮ್ಮಾ ನಾವು ನಾಳೆ ಪಪ್ಪೀ ಮದುವೆ ಮಾಡ್ತೀವಮ್ಮಾ

ಚಂಪ..... ಅದಿನ್ನೂ ಪಾಪನಲ್ಲೇ....

ರೋಜಿ....ನಾಳೇ ಈ....ಷ್ಟು ದೊಡ್ಡದಾಗೋಗುತ್ತೆ ಅಮ್ಮಾ (ಕೈ ದೊಡ್ಡದಾಗಿ ತೋರಿಸುವಳು)

ಚಂಪ.....ಸರಿ ಮಾಡೋವಂತೆ ನಡಿ ಸ್ಕೂಲಿಗೆ ಹೊತ್ತಾಯ್ತು.

(ಒಳಕ್ಕೆ ಹೋಗುವರು)

# 2ನೇ ದೃಶ್ಯ

(ಮದುವೆ ಮನೆ ಸಂಭ್ರಮ. ಓಲಗ (ರಿಕಾರ್ಡ್) ಹೆಣ್ಣಿನ ಕಡೆಯವರು 7-8 ಜನ, ಗಂಡಿನ ಕಡೆಯವರು 7-8 ಜನ, ಹೆಣ್ಣು-ಗಂಡು ಬೊಂಬೆಗಳಿಗೆ ಮದುವೆಯ ಅಲಂಕಾರ ಮಾಡಿರುತ್ತಾರೆ.)

[ವರಪೂಜೆ ಸಂದರ್ಭ]

ಗಂಡಿನ ಕಡೆಯುವರು-ರೀ....ಬೀಗಿತ್ತಿಯವ್ರಾ... ವರಪೂಜೆಗೆ ಎಲ್ಲಾ ಸಿದ್ಧ ಮಾಡಿ ತಂದಿದೀರಾ ?

ಹೆಣ್ಣಿನವರು... ಓ.. ಹೋ....ಎಲ್ಲಾ ಸಿದ್ಧವಾಗಿ ತಂದಿದೀವಿ. ಇದೋ ನೋಡಿ ತಟ್ಟೆಗಳು, ವರಪೂಜೆಗೆ ಗಂಡು ಬರಲೀ (ತಟ್ಟೆಗಳನ್ನು ಹಸೆ ಮಣೆ ಮುಂದೆ ಇಡುವರು. (ಎಲ್ಲಾ ಒರತೆ, ಬಣ್ಣದ ಪೇಪರಿನ ಉಡುಗೆರೆ)

ಪುರೋಹಿತರು... ಎಲ್ಲಿ ಒಂದು ಹಸೇ ಕರೆವ ಹಾಡು ಹೇಳೀಮ್ಮಾ . ಎಲ್ಲಿ ಗಂಡ್ ಬೇಗ ಬರಲಿ.

ಗಂಡಿನವರು... (ಅಲಂಕರಿಸಿದ ಗಂಡು ಬೊಂಬೆಯನ್ನು ತಂದು ಹಸೆಮೇಲೆ ಕೂರಿಸುವರು) ಮುತ್ತೈದೆಯರು ಹಾಡುವರು

ಹಸೆ ಗೀಗಾ ಬಾರೋ ಬೇಗನೇ
ದಶರಥಾ ಸುತ ರಾಮನೇ |ಪ|
ಕಿರೀಟ ಕಂಕಣ ಧರಿಸೀ
ಸರಿಗೇ ಪೀತಾಂಬರ ಉಡಿಸೀ
ನಡುಪಟ್ಟಿ ಶೃಂಗಾರ ಬೆರೆಸೀ
ನಡೆದೂ ಬಾ ಬೇಗ ಹಸೆಗೇ ||

ಸರೋಜಮ್ಮ... (ಗಂಡಿನ ತಾಯಿ) ಏನ್ರೀ ಚಂಪಾಬಾಯಿ ವರೋಪ ಚಾರ ಎಲಾ ಸರಿಯಾಗಿ ಇಟ್ಟಿದ್ದೀರಾ ?

ಚಂಪ (ಹೆಣ್ಣಿನ ತಾಯಿ) ಹೂಂ ಸರೋಜಮ್ಮ ವಾಚು, ಉಂಗುರ, ಪುಗುಟಿ ಸೂಟು, ಎಲ್ಲಾ ಇದೋ ನೋಡಿ ಇಟ್ಟಿದೀವಿ

ಶ್ರೀಪತಿ... (ಗಂಡಿನ ತಂದೆ) ಎಲ್ಲಪ್ಪಾ! ಶಂಕರ, ವರದಕ್ಷಿಣೆ ಹಣ ಪೂರ್ತಿ ಕೊಡಲಿಲ್ಲ?

ಶಂಕರ... (ಹೆಣ್ಣಿನ ತಂದೆ) ಸ್ವಲ್ಪ ಸಂಧಾರಿಸು ಶ್ರೀಪತಿ ನಾಳೆ ಧಾರೆವೇಳೆಗೆ ಕೊಡ್ತೀನಪ್ಪ

ಸರೋಜಮ್ಮ... ಕೇಳಿದ್ರಾ! ಚಂಪಾಬಾಯೀ .. ಇದೇನು ಮೋಸ ನಿಮ್ಮದೂ ?

ಚಂಪ.... ಅಯ್ಯೋ ರಾಮ ರಾಮ! ಖಂಡಿತ ಮೋಸ ಅಲ್ರೀ ಹಣ ಒದಗಲಿಲ್ಲ ನಾಳೆ ಹೊಂಚಿ ಕೊಡ್ತೀವಿ.

ಪುರೋಹಿತರು... (ನಶ್ಯ ಏರಿಸ್ತಾ) ಇರಲಿ ಸುಮ್ಮನಿರು ಸರೋಜಮ್ಮ ಶುಭ ಕೆಲಸ ಸಲೀಸಾಗಿ ನಡೀಲಿ ಹಣ ಎಲ್ಲಿ ಹೋಗುತ್ತೆ ?

ಶ್ರೀಪತಿ... ಲೋ ಶಂಕರ... ಇದ್ದಲ್ಲೆಲ್ಲಾ ಸ್ನೇಹಿತರಲ್ಲ ಧಾರೆಗೆ ಮೊದಲು ಹಣ ಬರದಿದ್ದರೆ ಹುಡುಗನ್ನ ಹಸೇಯಿಂದ ಎಬ್ಬಿಸಿ ಕರಕೊಂಡು ಹೋಗ್ತೀವಿ ತಿಳೀತಾ ?

ಶಂಕರ.... ಹಾಗೇ ಮಾಡಪ್ಪಾ! ಈಗ ಕೆಲಸ ನಡೀಲಿ

ಪುರೋಹಿತರು.... ಬನ್ನಿ ಬನ್ನೀಮ್ಮಾ... ಹುಡುಗನಿಗೆ ಕುಂಕುಮಹಚ್ಚಿ ಆರತಿ ಮಾಡಿ

(ಮುತ್ತೈದೆಯರು ಹಾಡು ಹೇಳಿ ಆರತಿ ಎತ್ತುವರು)

ಆರತಿ ಎತ್ತಿರೆ ನಾರಿಯರೂ
ಸುರ ಸುಂದರ ಸುಕುಮಾರನಿಗೆ ।

(ವರೋಪ ಚಾರದ ತಟ್ಟೆ ಒಂದೊಂದಾಗಿ ಗಂಡಿನ ಮುಂದೆ ಇಡುವರು)

(ಸಡಗರ ಓಡಾಟ)

ಪುರೋಹಿತರು.... ಎಲ್ಲಿ ಬೇಗ ಬೇಗ ಊಟದ ಸಿದ್ಧತೆ ಮಾಡೀಮ್ಮಾ । ನಾಳೆ ಎಂಟು ಗಂಟೆಗೇ ಧಾರೆ ಮುಹೂರ್ತ, ಬೆಳಗಿನ ಜಾವವೇ ಏಳಬೇಕು.

(ಗಂಡು ಬೊಂಬೆಯನ್ನು ಎತ್ತಿಕೊಂಡು ಎಲ್ಲಾ ಹೊರಡುವರು)

(ತೆರೆ ಬೀಳುವುದು)

## 3ನೇ ದೃಶ್ಯ

ಧಾರೆ ಮಂಟಪ, ಓಲಗ ವಾದ್ಯ ಆಗುತ್ತಿದೆ ಮುತ್ತೈದೆಯರು ಓಡಾಡುತ್ತಿದ್ದಾರೆ

ಪುರೋಹಿತರು....ಎಲ್ಲಿ ಹೆಣ್ಣು ಗಂಡು ಹಸೆ ಮೇಲಕ್ಕೆ ಬೇಗ ಬರಲಿ.

(ಅಲಂಕೃತ ಹೆಣ್ಣು ಬೊಂಬೆಯನ್ನು ತಂದು ಹಸೆ ಮೇಲೆ ಕೂರಿಸುವರು)

ಪುರೋಹಿತರು....ಎಲ್ಲೀಮ್ಮ ಅಕ್ಷತೆ ತನ್ನಿ ಮುಹೂರ್ತ ಮೀರುತ್ತೆ ಮಾಂಗಲ್ಯ ಧಾರಣೆ ಆಗಲಿ.

ಶ್ರೀಪತಿ .. (ಗಂಡಿನ ತಂದೆ) ತಡೀರಿ ಸ್ವಾಮಿ-ಇನ್ನೂ ವರದಕ್ಷಿಣೆ ಹಣ ಬಂದಿಲ್ಲ ಲೋ ...ಕುಮಾರ ತಾಳೋ, ತಾಲಿ ಕಟ್ಬೇಡ

ಶಂಕರ .. (ಹೆಣ್ಣಿನ ತಂದೆ) ಅಪ್ಪಾ! ಶ್ರೀಪತಿ; ಮುಹೂರ್ತ ಮೀರದಂತೆ ಮಾಂಗಲ್ಯ ಧಾರಣೆಯಾಗಲಿ, ಸ್ವಲ್ಪ ಸುಧಾರಿಸು ನಾನೇನೂ ಮೋಸ ಮಾಡೊಲ್ಲ ಇದಕ್ಕಾಗಿ ನನ್ನ ಪ್ರಾಣದಂತೆ ಇಟ್ಟು ಕೊಂಡಿದ್ದ ಸೀಮೆ ಹಸುವನ್ನು ಮೂರು ಸಾವಿರಕ್ಕೆ ಮಾರಿದೆ. ಅವರು ನಾಳೆ ಹಣ ಕೊಟ್ಟು ಹಸು ಹಿಡಿದು ಕೊಂಡು ಹೋಗ್ತಾರೆ ಆ ತಕ್ಷಣ ನಿಮಗೆ ಹಣ ಕೊಡ್ತೀನಿ.

ಶ್ರೀಪತಿ... ಎಲ್ಲೋ ತರ್ಲೆ ಜನ-ಏಳೋ-ಲೋ ಕುಮಾರು; ಎದ್ದೇಳೋ ತಾಳಿ ಕಟ್ಬೇಡ ಮೋಸಗಾರ್ರು (ಎಂದು ಕೋಪದಿಂದ ಗಂಡು ಬೊಂಬೆ ಯನ್ನು ಎತ್ತಿ ಕೊಳ್ಳುವನು)

(ಹೆಣ್ಣಿನ ತಂದೆ ತಾಯಿ ಅಳುತ್ತಾ) ಅಯ್ಯೋ....ನಿಮ್ಮ ದಮ್ಮಯ್ಯ ನಮ್ಮ ಹುಡಿಗೀ ತಲೆ ಮೇಲೆ ಕಲ್ಲು ಹಾಕ ಬೇಡಿ ಮಾನ ಕಾಪಾಡಿ ನಿಮ್ಮ ಹಣ ಖಂಡಿತ ಕೊಡುತ್ತೀವೆ ಬಡವರ ಕೈ ಬಿಡಬೇಡಿ.

ಶ್ರೀಪತಿ ...ನಡಿಯೇ ಇವರ ಹೆಣ್ಣೂ ಬೇಡ ಇವರ ಸಹವಾಸಾನೂ ಬೇಡ, ಬಾರೆ ಸರೋಜಿ ನಡೀರ್ರೋ ಎಲ್ಲಾ [ಹೊರಡುವರು]

ಪೋಲೀಸ್ ಅಧಿಕಾರಿ } ಸಭೆಯಲ್ಲಿ ಒಬ್ಬ ತರುಣ] ಎದ್ದು ಮುಂದೆ ಬಂದು] ಹಾಂ....ಹಾಂ [ತಡೀರಿ ಎಲ್ಲಿ ಹೋಗ್ತಿರಾ? ಇದೋ ನಾನು ಪೋಲೀಸ್ ಅಧಿಕಾರಿ, ವರದಕ್ಷಿಣೆ ತೆಗೆದು ಕೊಳ್ಳ ಕೂಡದು ಎಂದು ಕಾನೂನು ನಿಮಗೆ ಗೊತ್ತಿಲ್ಲವೋ?

ಶ್ರೀಪತಿ... [ಗಾಬರಿಯಿಂದ] ಹಾಂ! ನೀವಾ? ಪೋಲೀಸಿನವರಾ?

ಪೋಲೀಸ್....ಹೌದು ನಾವೇ....ಎಲ್ಲಿ ವರೋಪಚಾರ ಸಾಮಾನು ಹೆಣ್ಣಿನವರು ಕೊಟ್ಟ ಹಣ ಎಲ್ಲಾ ಇಲ್ಲಿ ಇಡಿ.

ಶ್ರೀಪತಿ....[ಭಯದಿಂದ] ಎಲ್ಲಾ ಇಡುವರು] [ಇಬ್ಬರು ಪೋಲೀಸಿನವರು ಬರುವರು]

ಪೋಲೀಸ್ ಅಧಿಕಾರಿ....ಇವರನ್ನು ಪೋಲೀಸ್ಟೇಷನ್ನಿಗೆ ಕರೆದು ಕೊಂಡು ನಡೀರಿ, ಎಲ್ಲಿ ಪುರೋಹಿತರೇ ಮಂತ್ರ ಹೇಳಿ. ಏಳಪ್ಪಾ ವರ ಮಹಾಶಯ ತಾಳಿ ಕಟ್ಟು.

ಪುರೋಹಿತರು....ಸುಲಗ್ನಾ ಸಾವಧಾನ ಸುಲಗ್ನಾ ಸಾವಧಾನ [ವಾದ್ಯ ವೊಳಗುವುದು] [ಗಂಡು ಬೊಂಬೆ ತಾಳಿ ಕಟ್ಟುವುದು.]

ಹೆಣ್ಣಿನ ಸ್ನೇಹಿತರು....ಲೇ ಕುಮಾರೀ ತಲೆ ಎತ್ತಿ ಸರಿಯಾಗಿ ನೋಡೇ ನಿನ್ನ ಗಂಡನ್ನ ನೋಡು ಎಷ್ಟು ಮುದ್ದಾಗಿದಾರೆ.

ಪೋಲೀಸ್....ಏನ್ರೀ....? ಅಳೀಮಯ್ಯ ವರದಕ್ಷಿಣೆ ಕೊಡಲಿಲ್ಲಾಂತ ಎಲ್ಲಾದ್ರೂ ನಮ್ಮ ಹುಡುಗೀಗೆ ಸೀಮೆ ಎಣ್ಣೆ ಸುರಿದು ಬೆಂಕಿ-ಗಿಂಕಿ ಹಚ್ಚೀರಾ? ಜೋಕೆ ನಾವೆಲ್ಲಾ ಇ ದೀವಿ ಹಾಗೆಲ್ಲಾ ಬಿಡೋಲ್ಲ ಈಗಿನಿಂದಲೇ ನಿಮ್ಮ ಮೇಲೆ ಒಂದು ಕಣ್ಣು ಇಟ್ಟೇ ಇದೀವಿ.

[ಹೆಣ್ಣಿನ ತಂದೆ ತಾಯಿ] [ಕೈ ಮುಗಿದು] ಸದ್ಯ ನಿಮ್ಮ ದಯದಿಂದ ನಮ್ಮ ಹುಡಿಗಿ ಮದುವೆ ನೆರವೇರಿತು. ನಮ್ಮ ಮಾನ ಉಳೀತು ಸದ್ಯ ನಮ್ಮ ಹಸೂನೂ ಉಳೀತು.

ಪೋಲೀಸ್....ಶಂಕರಪ್ಪನೋರೆ ಇದಕ್ಕೆಲ್ಲಾ ಕಾರಣ ಈ ನಿಮ್ಮ ಪುರೋಹಿತರು ಶುಬ್ಬಾ ಶಾಸ್ತ್ರಿಗಳು ನೆನ್ನೆ ಪೋಲೀಸ್ ಸ್ಟೇಷನ್ನಿಗೆ ಬಂದು ನಮಗೆ ಸೂಕ್ಷ್ಮ ಕೊಟ್ಟರು. ಅದಕ್ಕೇ ನಾವು ಇಲ್ಲಿ ಹಾಜರಾದೆವು.


ಶಂಕರಪ್ಪ....ಹಾಂ ನಮ್ಮ ಪುರೋಹಿತರು ಎಷ್ಟು ಒಳ್ಳೆಯವರು ಈ ಮದುವೆ ನೆರವೇರಿಸಿದ ಪುಣ್ಯ ನಿಮಗೇ ಇದೋ ಕೋಟಿ ನಮಸ್ಕಾರ.

ಪುರೋಹಿತರು.... ಇರಲಿ, ಸದ್ಯ ಈಗ ಎಲ್ಲಿ ಹೆಣ್ಣು ಗಂಡು ಮೆರವಣಿಗೆ ಹೊರಡಲಿ
ಎಲ್ಲಿ ಓಲಗ? ವಾದ್ಯ ಊದಿ. [ಓಲಗ ರೆಕಾರ್ಡ್] [ಹೆಣ್ಣು
ಗಂಡು ಬೊಂಬೆಗಳನ್ನು ಒಬ್ಬೊರು ಹಿಡಿದು ಕೊಂಡು ಎಲ್ಲರೂ
ಮೆರವಣಿಗೆ ಹೊರಡುವರು]
[ಕಡೆಯಲ್ಲಿ ಪುರೋಹಿತರು]

ಇಲ್ಲಿ ನೆರೆದಿರುವ ಮಹಾ ಜನಗಳೇ ಇದು ಪಪ್ಪೀ ಮದುವೆ ಅಂತ ನಾವು ಆಟಕ್ಕೆ ಬೊಂಬೆ ಮದುವೆ ಮಾಡಿದರೂ ಈಗಿನ ಸಮಾಜದಲ್ಲಿ ವರದಕ್ಷಿಣೆ ಕಾಟ ಜಾಸ್ತಿಯಾಗಿ ಹೆಣ್ಣಿನವರನ್ನು ಕಾಡಿಸಿ, ಕಡೆಗೆ ಆ ಹೆಣ್ಣಿಗೂ ಚಿತ್ರಹಿಂಸೆ ಮಾಡಿ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿದ ಸಮಾಚಾರಗಳೇ ಜಾಸ್ತಿಯಾಗಿದೆ. ಅದಕ್ಕೆ ತಕ್ಕ ಶಾಸ್ತ್ರೀ ನಮ್ಮ ಪಪ್ಪೀ ಮದುವೆ ಮಾದರಿ ಆಗುವುದೇ ಸರಿ ಅಂತ ನನ್ನ ಅಭಿಪ್ರಾಯ ನಿಮ್ಮ ಸಲಹೆ ಏನು ಹೇಳ್ತೀರಾ?..............

ನಮಸ್ಕಾರ.
ಹೋಗುವನು ತೆರೆ ಬೀಳುವುದು.

## [ ಶಿಬಿಯ ತ್ಯಾಗ ]



ಶಿಬಿಯು ಒಬ್ಬ ರಾಜನಂತೆ
ಅವನು ಬಹಳ ದಾನಿಯಂತೆ
ದಯೆಯೆ ಅವನ ಧರ್ಮವಂತೆ
ತ್ಯಾಗ ವವನ ಜೀವವಂತೆ

ಮೂರು ಲೋಕ ಹೊಗಳಿತಂತೆ
ಶಿಬಿಗೆ ಸಾಟಿ ಇಲ್ಲವಂತೆ
ದೇವ ಲೋಕ ನಡುಗಿತಂತೆ
ದೇವ ರಾಜ ಭೀತಿಗೊಂಡ

ತನ್ನ ಸ್ಥಾನ ಶಿಬಿಗೆ ಸಿಕ್ಕಿ
ತಾನು ರಾಜ್ಯ ಕಳೆದುಕೊಂಡು
ಹಾದಿ ಬೀದಿ ಅಲೆವಚಿಂತೆ
ಅವನ ಮನವ ಕಾಡಿತು

ಶಿಬಿಯ ವ್ರತಕೆ ಭಂಗ ತರಲು
ದೇವ ರಾಜ ಗಿಡುಗ ನಾದ
ಅಗ್ನಿಯೂದ ಪಾರಿವಾಳ
ಭರದಿ ಹಾರಿ ಬಂದುವು

ಗಿಡಗ ತಾನು ಎರಗಿತಾಗ
ಪಾರಿವಾಳ ಹಾರಿ ಬಂದು
ಗಡ ಗಡನೆ ನಡುಗಿ ತಾನು
ಶಿಬಿಯ ಬಳಿಗೆ ವಾಲಿತು

ಶಿಬಿಯು ಆಗ ನಡೆಯುತಿದ್ದ
ಶಿಬಿರ ದಾಚೆ ಸಂಜೆ ಗಾಳಿ
ಸವಿಯಲೆಂದು ಬಂದು
ನಿಂತ ಮರದ ಬಳಿಯಲಿ

ಬಾನಿ ನಿಂದ ಭರದಿ ಬಂದು
ಭಯದಿ ನಡುಗಿ ಪಾರಿವಾಳ
ಶಿಬಿಯ ಕಾಲ ಬಳಿಯೆ
ಬಿದ್ದು ಜೀವದಾನ ಬೇಡಿತು

ಗಿಡಗ ಹಕ್ಕಿ ರೋಷದಿಂದ
ಅದರ ಮೇಲೆ ಎರಗಿ ಬರಲು
ಶಿಬಿಯು ಬೇಗ ಎತ್ತಿಕೊಂಡು
ಅಭಯ ನೀಡಿ ತಣಿಸಿದ

ಪಾರಿ ವಾಳ ನನ್ನ ಊಟ
ಅದರ ತೂಕ ನಿನ್ನ ಮಾಂಸ
ಕೊಡುವೆ ಎನೆ ಬಿಡುವೆ
ಅದನು ಎಂದಿತಾಗ ಗಿಡಗನು

ಅಭಯ ವಿತ್ತ ಜೀವಿಗಾಗಿ
ಒಡಲ ಮಾಂಸ ಕೊಡಲು
ಶಿಬಿಯು ತೊಡೆಯ ಬಳಿಯ
ಮಾಂಸ ಕೊಯ್ದು ತೂಕಕಿಟ್ಟನು

ಹಕ್ಕಿ ತೂಕ ಏರಲಿಲ್ಲ
ತ್ರಾಸು ಸಮ ವಾಗಿಲಿಲ್ಲ
ಮತ್ತೆ ಮತ್ತೆ ಕೊಯ್ದು ಕೊಯ್ದು
ಮಾಂಸ ತೂಕ ಕ್ಕ್ಹಾಕಿದ

ಶಿಬಿಯ ದೇಹ ಬಳಲಿತಾಗ
ಭುವಿಗೆ ಬಿದ್ದು ಹೊರಳಿದ
ನನ್ನ ದೇಹಪೂರ ತಿಂದು
ಗಿಡಗ ನೀನು ತೃಪ್ತಿಹೊಂದು

ಶಿಬಿಯು ಮಾತು ಕೇಳಿ ಇಂದ್ರ
ತನಗೆ ತಾನೆ ಮೆಚ್ಚಿ ಕೊಂಡ
ಪರರ ಜೀವ ಉಳಿಸಲೆಂದು
ತನ್ನ ದೇಹ ತೆತ್ತ ತ್ಯಾಗಿ

ದಯಾವಂತ ಶಿಬಿಯೆ ಕೇಳು
ಪಾರಿವಾಳ ಗಿಡಗವಲ್ಲ
ನಾವು ಇಂದ್ರ ಅಗ್ನಿಯು
ನಿನ್ನ ಪರಿಕಿಸೆ ಬಂದೆವು

ನೀನು ಘನನು ಮಹಾತ್ಯಾಗಿ
ನಿನ್ನ ಮಹಿಮೆ ಮೆರೆಯಲಿ
ವರವ ಕೇಳು ಕೊಡುವೆ ವೆಂದು
ನಿಜವ ತೋರಿ ನಿಂತರು

ಶಿಬಿಯು ಎದ್ದು ಕೈಯ್ಯ
ಮುಗಿದು ಧನ್ಯನಾದೆ ನಿಮ್ಮನೋಡಿ
ಜೀವಿಗಳಿಗೆ ಅಭಯ ನೀಡಿ
ಇದೇ ನನ್ನ ಬೇಡಿಕೆ

ಶಿಬಿಯ ತ್ಯಾಗ ಮೂರುಲೋಕ
ಮೆಚ್ಚಲೆಂದು ಹಾಡಿ ಹರಸಿ
ಇಂದ್ರ ಅಗ್ನಿ ಮಾಯವಾಗಿ
ಬೆಳಕ ಚೆಲ್ಲಿ ಹೋದರು

ಪುಟ್ಟ ಮಕ್ಕಳೆಲ್ಲ ನೀವು
ಶಿಬಿಯ ಕಥೆಯ ಕೇಳಿ ಬಾಳಿ
ಪ್ರಾಣಿಗಳಲಿ ದಯೆಯ ತೋರಿ
ಜಾಣರಾಗಿ ಬೆಳೆಯಿರಿ



ಈ ಲೇಖಕಿಯ ಇತರ ಕೃತಿಗಳು :

ಲಂಬಾಣಿಲಕ್ಕಿ - ಕಾದಂಬರಿ
ಮೌನಗೀತೆ ಎಂಬ ಹೆಸರಿನಲ್ಲಿ ಚಿತ್ರೀಕರಣ ಮುಗಿದಿದೆ.
ಮಕ್ಕಳಿಗೆ - ಮಧು - ಕಾವ್ಯಾನಂದ ಪುರಸ್ಕಾರ ಪಡೆದ ಪುಸ್ತಕ.

ಸಣ್ಣ ಕತೆಗಳು :

ಪರ್ವತ ಪ್ರಪಾತ    ಅಂತರಂಗದ ಅಲೆ    ಅಪವಾದ
ನನ್ನ ಒಗಟಿಗೆ ಉತ್ತರ    ವಂಶೋದ್ಧಾರಕ    ನಿಶಾಚರಿ
ನಾಗ-ಸಾಕಿ (ಮಕ್ಕಳ ಕತೆ) ಇನ್ನೂ ಮುಂತಾದುವು

ಪ್ರಕಟಿಸಲು ಸಿದ್ಧವಾಗಿರುವ ನಾಟಕಗಳು :

ವರಸಾಮ್ಯ ಅಥವಾ ಮಾದರಿ ಮದುವೆ (ಸಾಮಾಜಿಕ)
ಅದೃಷ್ಟ - ಸಾಮಾಜಿಕ
ಮಿತಸಂತಾನವೇ ಸುಖಸಂಸಾರ - ನಾಟಕ
ರಾಧಾಮಾದವ - ಪೌರಾಣಿಕ
ಬಂಧವಿಮೋಚನೆ - ಪೌರಾಣಿಕ
ಮತ್ತು ಕವನಗಳು